ಈ ದಿನ ದಿನಾಂಕಃ 23.06.2026 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಆರ್ ಬಿ ವಕೀಲರಿಂದಃ**

ನಾನು ಪದವೀಧರ. ನಾನು ಹಾಲಿ ಶಿವಮೊಗ್ಗದಲ್ಲಿ ವಾಸವಾಗಿದ್ದೇನೆ ಎಂದರೆ ಸರಿ. ನಾನು 25-30 ವರ್ಷಗಳಿಂದ ಶಿವಮೊಗ್ಗದಲ್ಲಿ ವಾಸವಾಗಿದ್ದೇನೆ. ವಾದಿಯು ನನ್ನ ವಿರುದ್ದ ಆಸ್ತಿ ಸಂಖ್ಯೆ 63ಪಿ1, 63ಪಿ2, 63ಪಿ3 ಮತ್ತು 63ಪಿ4 ರ ಸ್ವತ್ತಿನ ಮೇಲೆ ದಾವೆ ಹೂಡಿರುತ್ತಾರೆ. ನಿಮ್ಮ ಆಸ್ತಿಯ ಸಂಖ್ಯೆ ಏನು ಎಂದರೆ ನಾನು ಈಗ ಹೇಳಿದ ಸ್ವತ್ತಿನ ಸಂಖ್ಯೆಗಳೇ ನನ್ನ ಸ್ವತ್ತುಗಳು. ನನ್ನ ತಂದೆ ಖರೀದಿ ಮಾಡಿದ ಆಸ್ತಿಗಳು ಮೂಲತಃ ಪೀರ್ ಸಾಬ್ ಅಜೀಜ್ ಸಾಬ್ ರವರ ಹೆಸರಿಗೆ ಇತ್ತು. ನನ್ನ ತಂದೆ ಖರೀದಿ ಮಾಡಿದ ಸ್ವತ್ತುಗಳ ಖರೀದಿ ಪತ್ರವನ್ನು ನಾನು ನೋಡಿರುತ್ತೇನೆ. ಖರೀದಿ ಪತ್ರದಲ್ಲಿ ಸ್ವತ್ತಿನ ವಿಸ್ತೀರ್ಣವನ್ನು ಅಂಕಣ ರೂಪದಲ್ಲಿ ನಮೂದಿಸಿದ್ದು ಅಡಿಗಳ ಲೆಕ್ಕದಲ್ಲಿ ಬರೆದಿರುವುದಿಲ್ಲ. ನನ್ನ ತಂದೆ ಕ್ರಯಪತ್ರದ ಪ್ರಕಾರ 8 ಅಂಕಣ ಆಸ್ತಿಯನ್ನು ಖರೀದಿ ಮಾಡಿದ್ದರು. ನನ್ನ ತಂದೆ ಖರೀದಿ ಮಾಡಿದ ನಿಡಿ-5 ರಿಂದ 9 ರವರೆಗಿನ ಆಸ್ತಿಗಳನ್ನು ನಾವು ಹಳೆಯ ಪತ್ರದ ಆಧಾರದಂತೆ ಭಾಗ ಮಾಡಿಕೊಂಡಿರುತ್ತೇವೆ. ಸದರಿ ಭಾಗವನ್ನು ನಾವು ಚನ್ನಗಿರಿಯ ಉಪನೊಂದಣಾಧಿಕಾರಿ ಕಚೇರಿಯಲ್ಲಿ ಮಾಡಿಕೊಂಡಿರುತ್ತೇವೆ. ಸದರಿ ವಿಭಾಗಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ನಾನು ಹಾಜರುಪಡಿಸಿರುವ ದಾಖಲೆಗಳಲ್ಲಿ ನನ್ನ ವಿಭಾಗಪತ್ರವು ಇರುವುದಿಲ್ಲ ಎಂದು ಸಾಕ್ಷಿಯು ದಾಖಲೆಗಳನ್ನು ನೋಡಿ ನುಡಿಯುತ್ತಾರೆ. ನಿಡಿ-5 ರ ಸ್ವತ್ತಿನಲ್ಲಿ ಸದರಿ ಸ್ವತ್ತು ನನಗೆ ವಿಭಾಗದ ಮುಖಾಂತರ ಬಂದಿರುತ್ತದೆ ಎಂದು ನಮೂದಾಗಿಲ್ಲ ಎಂದರೆ ಸರಿ. ನಿಡಿ-5 ರಿಂದ 9ರವರೆಗಿನ ಸ್ವತ್ತುಗಳನ್ನು ನಾನು ಪಂಚಾಯತಿಯ ಅಧಿಕಾರಿಗಳ ಜೊತೆ ಶಾಮೀಲಾಗಿ ಇ-ಸ್ವತ್ತನ್ನು ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ನಿಡಿ-5 ರಿಂದ 9 ರವರೆಗಿನ ಆಸ್ತಿಗಳಲ್ಲಿ ನನ್ನ ಭಾಗಕ್ಕೆ 3 ಸ್ವತ್ತುಗಳು ಬಂದಿರುತ್ತದೆ. ಮಹಮ್ಮದ್ ಇಬ್ರಾಹಿಂರವರ ಭಾಗಕ್ಕೆ ಒಂದು ಆರ್ ಸಿ ಸಿ ಮನೆ ಬಂದಿರುತ್ತದೆ. ನಿಡಿ-5 ರಿಂದ 9 ರವರೆಗಿನ ಆಸ್ತಿಗಳಲ್ಲಿ ಅಂಜುಂ ಪಾಷಾರವರ ಹೆಸರಿಗೆ ಒಂದು ಮನೆ ಮತ್ತು ಒಂದು ಅಂಗಡಿ ಮತ್ತು ಒಂದು ಖಾಲಿ ನಿವೇಶನ ಬಂದಿರುತ್ತದೆ. ನಿಡಿ-5 ರಿಂದ 9 ರವರೆಗಿನ ಸ್ವತ್ತುಗಳಲ್ಲಿ ಯಾರು ಯಾರಿಗೆ ಎಷ್ಟು ಎಷ್ಟು ವಿಸ್ತೀರ್ಣದಲ್ಲಿ ಅಸ್ತಿ ಬಂದಿರುತ್ತದೆ ಎಂದು ನನಗೆ ಈಗ ಮಾಹಿತಿ

ಇರುವುದಿಲ್ಲ. ನಾನು ಶಿವಮೊಗ್ಗದಲ್ಲಿ ವಾಸವಾಗಿರುವುದರಿಂದ ವಾದಿಗೆ ಎಷ್ಟು ಆಸ್ತಿ ಮತ್ತು ನಮಗೆ ಎಷ್ಟು ಆಸ್ತಿ ಇದೆ ಎಂದು ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ನಿಡಿ-2ರ ಫೋಟೋದಲ್ಲಿ ವಾದಿಗೆ ಸೇರಿದ ಸ್ವತ್ತಿನಲ್ಲಿ ಪೂರ್ವಕ್ಕೆ ಮತ್ತು ಉತ್ತರಕ್ಕೆ ಬಾಗಿಲು ಇದೆ ಎಂದರೆ ಯಾವುದೇ ಬಾಗಿಲು ಮತ್ತು ಕಿಟಕಿಗಳು ಇರುವುದಿಲ್ಲ.

ನಿಡಿ-5 ರಿಂದ 9 ರವರೆಗಿನ ಆಸ್ತಿಗಳು ನನ್ನ ತಂದೆ ಖರೀದಿ ಮಾಡುವ ಪೂರ್ವದಲ್ಲಿ ಖಾಲಿ ನಿವೇಶನವಾಗಿತ್ತು ಎಂದರೆ ಹುಲ್ಲಿನ ಮನೆ ಇದ್ದವು. ವಾದಿಯ ತಂದೆ ದಾವಾಸ್ತಿಯ ಉತ್ತರ ಭಾಗದಲ್ಲಿ 3 ಅಡಿ ಜಾಗವನ್ನು ಅವರ ಮನೆಯವರು ತಿರುಗಾಡಲು ಮತ್ತು ಮನೆಯ ರಿಪೇರಿ ಮಾಡಿಕೊಳ್ಳಲು ಬಿಟ್ಟುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ವಾದಿಯವರು ಹಿತ್ತಲ ಬಾಗಿಲಿದಿಂದ ಓಡಾಡುತ್ತಿದ್ದರು ನಮ್ಮ ಮನೆಯ ಮುಂದೆ ಓಡಾಡುತ್ತಿರಲಿಲ್ಲ ಎಂದು ನುಡಿಯುತ್ತಾರೆ. ವಾದಿಯ ತಂದೆ ಖರೀದಿ ಮಾಡಿದಂತಹ ದಾವಾಸ್ತಿಯಲ್ಲಿ ವಾದಿ ಸ್ವಾಧೀನಾನುಭವದಲ್ಲಿದ್ದರು ಸಹ ವಾದಿಗೆ ಸೇರಿದ 3 ಅಡಿ ಜಾಗವನ್ನು ಕಬಳಿಸುವ ಉದ್ದೇಶದಿಂದ ಸದರಿ ಜಾಗವು ನನಗೆ ಸೇರಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಒಂದು ಅಂಕಣಕ್ಕೆ 3ವರೆ ಅಡಿ ಇದ್ದರು ಸಹ ನಾನು ನನ್ನ ಪ್ರತಿವಾದ ಪತ್ರದಲ್ಲಿ 7 ರಿಂದ 9 ಅಡಿಗೆ ಒಂದು ಅಂಕಣ ಎಂದು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದ ಪತ್ರದಲ್ಲಿ ಹೇಳಿರುವ ಎಲ್ಲಾ ವಿಚಾರಸುಳ್ಳು ಎಂದರೆ ಸರಿಯಲ್ಲ. ದಾವ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು ಮತ್ತು ಸ್ವಾಧೀನ ಇಲ್ಲದೆ ಇದ್ದರು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

02ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.